ಕೂಡಲ ಸಂಗಮ ಅಭಿವೃದ್ಧಿಗಾಗಿ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಆಯೋಗದ ಶಿಫಾರಸ್

೧೪೩೪ (೨೨೧೯) ಶ್ರೀ ಶಿವಾನಂದ ಪಟ್ಟಣ. ಕೌಜಲಗಿ (ಬೈಲಹೊಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಆಯೋಗವು ಸರ್ಕಾರಕ್ಕೆ ಯಾವ ಯಾವ ಶಿಫಾರಸ್ಸುಗಳನ್ನು ಮಾಡಲಾಗಿದೆ?

ಆ) ಕೂಡಲ ಸಂಗಮ ಅಭಿವೃದ್ಧಿ ಸಲುವಾಗಿ ಮಾಡಿರುವ ಯಾವ ಯಾವ ಸಲಹೆಗಳನ್ನು ಸರ್ಕಾರದವರು ಒಪ್ಪಿಕೊಂಡಿರುವರು?

ಇ) ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಇವರು ಮಾಡಿರುವ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಸರ್ಕಾರದವರು ಯಾವ ಯಾವ ಕ್ರಮ ಕೈಗೊಂಡಿರುವರು, ಮತ್ತು ಅವರ ಶಿಫಾರಸ್ಸನ್ನು ಅನುಷ್ಠಾನ ಮಾಡುವ ಸಲುವಾಗಿ ಸರ್ಕಾರದ ವಾಸ್ತುಶಿಲ್ಪಿಯವರು ನಕಾಶ ಮಾಡಿದ ಸಂಗತಿ ನಿಜವೇ?

ಈ) ಸರ್ಕಾರದ ವಾಸ್ತು ಶಿಲ್ಪಿಯವರು ತಯಾರಿಸಿದ ನಕಾಶ ಪ್ರಕಾರ ಕೆಲಸ ಕೈಕೊಂಡಲ್ಲಿ ಅಂದಾಜು ಎಷ್ಟು ಹಣ ಬೇಕಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಕೂಡಲ ಸಂಗಮ ಕ್ಷೇತ್ರ ಮತ್ತು ಹೊಸ ಸಂಕೀರ್ಣದ ಅಭಿವೃದ್ಧಿ ಬಗ್ಗೆ ವಿಶ್ವನಾಥ ರೆಡ್ಡಿ ಮುದ್ನಾಳ್ ಸಮಿತಿಯ ಮುಖ್ಯ ಶಿಫಾರಸ್ಸುಗಳು ಈ ಕೆಳಕಂಡಂತಿವೆ:-

೧) ಸಂಗಮೇಶ್ವರ ದೇವಾಲಯದ ಗರ್ಭಗುಡಿಯನ್ನು, ಮೂಲ ಲಿಂಗಕ್ಕೆ ಧಕ್ಕೆಯಾಗದಂತೆ, ಆಧುನಿಕ ತಂತ್ರಜ್ಞಾನದಿಂದ ಭದ್ರ ಪಡಿಸಬೇಕು.

೨) ಈಗಾಗಲೇ ಬಿಚ್ಚಲಾಗಿರುವ ದೇವಾಲಯದ ಪ್ರಾಕಾರವನ್ನು ಅದೇ ಸ್ಥಳದಲ್ಲಿ ಮೊದಲಿನ ರೂಪದಲ್ಲೇ ತಾಂತ್ರಿಕ ಸುಧಾರಣೆಯೊಂದಿಗೆ ಪುನರ್ ನಿರ್ಮಾಣ ಮಾಡಬೇಕು.

೩) ಅಂತರಾಷ್ಟ್ರೀಯ ಬಸವ ಕೇಂದ್ರವನ್ನು ಸ್ಥಾಪಿಸಬೇಕು.

೪) ಉದ್ದೇಶಿತ ಸಂಕೀರ್ಣಕ್ಕಾಗಿ ಈಗಾಗಲೇ ವಶಪಡಿಸಿಕೊಂಡಿರುವ ೧೦೨ ಎಕರೆ ಭೂಮಿಯ ಜೊತಗೆ ಇನ್ನೂ ೩೦೦ ಎಕರೆ ಭೂಮಿ ವಶಪಡಿಸಿಕೊಳ್ಳಬೇಕು.

೫) ಕೂಡಲ ಸಂಗಮ ಕ್ಷೇತ್ರವನ್ನು ಅಂತರ ರಾಷ್ಟ್ರೀಯ ಪ್ರವಾಸೀ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಬೇಕು.

೬) ಸಂಕೀರ್ಣದಲ್ಲಿ, ಅಂತರ ರಾಷ್ಟ್ರೀಯ ಬಸವ ಸ್ಮಾರಕ ಗ್ರಂಥಾಲಯ, ವಾಚನಾಲಯ, ಶ್ರವಣ ದೃಶ್ಯ ವಿಭಾಗ, ವಚನ ಸಾಹಿತ್ಯ ಸಂಶೋಧನಾ ಕೇಂದ್ರ, ಆಡಳಿತ ಕಾರ್ಯಾಲಯ, ಬಯಲು ರಂಗಮಂದಿರ, ಅನುಭವ ಮಂಟಪ, ಪ್ರವಾಸಿ ಗೃಹ, ಯಾತ್ರಿಕ ನಿಲಯ, ಛತ್ರಗಳು, ಡಾರ್ಮಿಟರಿಗಳು, ಪಾಣಿಜ್ಯ ಸಂಕೀರ್ಣ, ಪ್ರಾರ್ಥನಾ ಮಂದಿರ, ಕಾಯಕ ಕೇಂದ್ರ, ಕಿರು ವಿಮಾನ ನಿಲ್ದಾಣ, ಚಿಕಿತ್ಸಾಲಯ, ಶಾಲೆಗಳು, ಯೋಗಮಂದಿರ, ಪ್ರಕಟಣಾ ವಿಭಾಗ, ಸುರಕ್ಷಿತ ಕುಡಿಯುವ ನೀರು ಸರಬರಾಜು, ಶೌಚಾಲಯ, ಸ್ನಾನ ಗೃಹಗಳು, ಮತ್ತು ಸೂಕ್ತ ಒಳಚರಂಡಿ ವ್ಯವಸ್ಥೆ ಇವುಗಳನ್ನು

ಒದಗಿಸಬೇಕು.

ಆ) ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿಯ ಶಿಫಾರಸ್ಸುಗಳನ್ನು ದಿನಾಂಕ ೨೨-೯-೧೯ಅಲಲರ ಸರ್ಕಾರಿ ಆದೇಶದಲ್ಲಿ ಈಗಾಗಲೇ ಒಪ್ಪಿಕೊಳ್ಳಲಾಗಿದೆ

೧) ಕೇಂದ್ರ ಕಟ್ಟಡದ ಸಂಶೋಧನೆ ಸಂಸ್ಥೆ, ರೂರ್ಕಿ, ಇವರಿಗೆ ಸಂಗಮೇಶ್ವರ ದೇವಾಲಯದ ಸಂರಕ್ಷಣಾ ಕ್ರಮವನ್ನು ಸೂಚಿಸುವಂತೆ ಕೋರಲಾಗಿತ್ತು. ಈ ಸಂಸ್ಥೆಯವರು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರ ಪ್ರಕಾರ ದೇವಾಲಯದ ಗರ್ಭ ಗುಡಿಯ ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಲಾಗಿದೆ, ಹಾಗೂ, ಐಕ್ಯ ಮಂಟಪಕ್ಕೆ ಹೋಗಲು ಶಾಶ್ವತ ಮೆಟ್ಟಿಲುಗಳಿಗೆ ಮುಖ್ಯ ವಾಸ್ತು ಶಿಲ್ಪಿಯವರಿಂದ ನೀಲಿ ನಕ್ಷೆ ತಯಾರಿಸಿ ಅಂದಾಜು ವೆಚ್ಚ ಪತ್ರಿಕೆಯನ್ನೂ ಸಹ ತಯಾರಿಸಲಾಗಿದೆ. ಈ ಅಂದಾಜು ವೆಚ್ಚ ಪತ್ರಿಕೆಗಳು ಪರಿಶೀಲನೆಯಲ್ಲಿ ಇರುತ್ತವೆ.

೨) ಸಂಕೀರ್ಣದ ಕಟ್ಟಡಗಳ ನಕ್ಷೆಗಳನ್ನು ಮುಖ್ಯ ವಾಸ್ತು ಶಿಲ್ಪಿಯವರು ತಯಾರಿಸಿದ್ದಾರೆ.

೩) ಸಂಕೀರ್ಣದ ಅಭಿವೃದ್ಧಿಗೆ ಬೇಕಾದ ಉಳಿದ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯ ಪ್ರಕಾರ ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ.

ಈ) ಸಂಗಮೇಶ್ವರ ದೇವಾಲಯದ ಸಂರಕ್ಷಣೆ ಹಾಗೂ ಹೊಸ ಸಂಗಮ ಸಂಕೀರ್ಣದ ಅಭಿವೃದ್ಧಿಗೆ ಸುಮಾರು ೧೩.೮೨ ಕೋಟಿ ರೂ. ಗಳು ಆಗಬಹುದೆಂದು (೧೯ಅಲಲ-೯೯ರ ದರಗಳ ಪ್ರಕಾರ) ಅಂದಾಜು ಮಾಡಲಾಗಿದೆ.

ತುಮಕೂರು ದೇವರಾಯನ ದುರ್ಗದಲ್ಲಿ ಪ್ರವಾಸಿ ಕೇಂದ್ರ ಸ್ಥಾಪಿಸುವುದು

೧೪೩೮ (೨೨೬೭) ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ತುಮಕೂರಿನ ದೇವರಾಯನ ದುರ್ಗದಲ್ಲಿ ಪ್ರವಾಸಿ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಇಲ್ಲಿ ಅಭಿವೃದ್ಧಿ ಕಾರ್ಯಗಳಿಗೇನಾದರೂ ಅನುದಾನ ನೀಡುವ ಯೋಜನೆ ಇದೆಯೇ?

ಇ) ಈ ಮೇಲ್ಕಂಡ ಸ್ಥಳದಲ್ಲಿ 'ಸಫಾರಿ ಪಾರ್ಕ್' ಪ್ರಾರಂಭಿಸುವ ಬಗ್ಗೆ ಪ್ರಸ್ತಾಪವಿದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಸರ್ಕಾರವು ದೇವರಾಯನ ದುರ್ಗವನ್ನು ಪ್ರವಾಸಿ ಕೇಂದ್ರವೆಂದು ಗುರುತಿಸಿದೆ. ಇಲ್ಲಿ ಎರಡು ಹಾಸಿಗೆಗಳಿಂದ ಕೂಡಿದ ಎರಡು ಕೊಠಡಿ, ಭೋಜನ ಕೊಠಡಿ ಹಾಗೂ ಅಡಿಗೆ ಕೋಣೆಗಳಿಂದ ಕೂಡಿದ ಪ್ರವಾಸಿ ಮಂದಿರವನ್ನು ನಿರ್ಮಿಸಲಾಗುತ್ತಿದೆ.

ಆ) ಸರ್ಕಾರವು ಪ್ರವಾಸಿ ಗೃಹದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು ರೂ. ೫೫,೦೦೦-೦೦ (ಐವತ್ತೈದು ಸಾವಿರ) ರೂಪಾಯಿಗಳನ್ನು, ದೇವಸ್ಥಾನದಿಂದ ಪ್ರವಾಸಿ ಮಂದಿರದವರೆಗೆ ಇರುವ ೬೦೦ ಮೀ. ದೂರದ ರಸ್ತೆಯನ್ನು ಉತ್ತಮಗೊಳಿಸಲು ರೂ. ೮೫,೫೦೦-೦ (ಎಂಭತ್ತೈದು ಸಾವಿರದ ಐನೂರು) ರೂಪಾಯಿಗಳ ಅಂದಾಜು ವೆಚ್ಚಕ್ಕೆ ೧೯೯೯-೨೦೦೦ರ ಪ್ರಸ್ತುತ ಸಾಲಿನಲ್ಲಿ